ಸಿ.ಸಿ. **196/2020**
ಪಿ.ಡಬ್ಲ್ಯೂ.-1

ದಿನಾಕಃ 24.10.2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು ಆರೋಪಿ ಪರ ಶ್ರೀ ಬಿ.ಆರ್ ವಕೀಲರಿಂದಃ**

ನಾನು ಡಿಪ್ಲೋಮವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೂ ಆರೋಪಿಗೂ 1994 ರಿಂದ ಪರಿಚಯ. ಆರೋಪಿ ನನ್ನ ಬಳಿ ಹಣ ಕೇಳಿರುತ್ತಾರೆಂದು ನಾನು ಹೇಳಿದ್ದು ಏಪ್ರಿಲ್ 2012 ರಂದು ಕೇಳಿರುತ್ತಾರೆ. ಯಾವ ಉದ್ದೇಶಕ್ಕಾಗಿ ಎಂದರೆ ಸಾಕ್ಷಿ ಆರೋಪಿ ಮತ್ತು ಅವನ ಸ್ನೇಹಿತನಾದ ಪ್ರದೀಪರವರ ಜೊತೆ ಕೇಮಿಕಲ್ ಫ್ಯಾಕ್ಟರಿ ಮಾಡುವ ಉದ್ದೇಶದಿಂದ 4 ಲಕ್ಷ ಹಣವನ್ನು ಕೇಳಿರುತ್ತಾರೆ. ಸದರಿ ಸ್ನೇಹಿತನನ್ನು ನಾನು ನೋಡಿರುತ್ತೇನೆ. ಸದರಿ ವಿಚಾರವನ್ನು ನನ್ನ ದೂರಿನಲ್ಲಿ ಮತ್ತು ನೋಟೀಸ್ ನಲ್ಲಿ ನಮೂದು ಮಾಡಿರುವುದಿಲ್ಲ. ಸದರಿ ಬಗ್ಗೆ ನಮೂದು ಮಾಡಲು ತೊಂದರೆ ಇರಲಿಲ್ಲ. ಏಪ್ರೀಲ್ 2012 ರಲ್ಲಿ ಹಣವನ್ನು ನೀಡಲು ಅವಧಿಯನ್ನು ಕೇಳಿದ್ದೀರಿ ಎಂದರೆ ಸಾಕ್ಷಿ 1 ವಾರದ ನಂತರ ಹಣವನ್ನು ನೀಡಿರುತ್ತೇನೆ. ಏಪ್ರೀಲ್ 1 ನೇ ವಾರದಲ್ಲಿ ಹಣವನ್ನು ಕೇಳಿದ್ದು ನಾನು 2 ನೇ ವಾರ ಹಣವನ್ನು ನೀಡಿರುತ್ತೇನೆ. ಆರೋಪಿಗೆ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಯಾವ ಸ್ಥಳದಲ್ಲಿ ಹಣ ನೀಡಿದ್ದೀರಿ ಎಂದರೆ ಸಾಕ್ಷಿ ಬಿಳಿಕೆರೆ ವರ್ಕ ಶಾಪ್ ಬಳಿ ನೀಡಿರುತ್ತೇನೆಂದು ನುಡಿಯುತ್ತಾರೆ. ಹಣವನ್ನು ನೀಡುವ ಸಮಯದಲ್ಲಿ ನಮ್ಮ ಕೆಲಸಗಾರರು ಇದ್ದರು ಆರೋಪಿಯೊಂದಿಗೆ ಯಾರು ಇರಲಿಲ್ಲ. ಆರೋಪಿ ಎಷ್ಟು ದಿನಗಳ ನಂತರ ಹಣವನ್ನು ಮರುಪಾವತಿ ಮಾಡುತ್ತೇನೆಂದು ಅವಧಿಯನ್ನು ತೆಗೆದುಕೊಂಡಿದ್ದರು ಎಂದರೆ ಸಾಕ್ಷಿ 6 ತಿಂಗಳ ಅವಧಿ. ಸದರಿ ಹಣಕ್ಕೆ ಬಡ್ಡಿಯನ್ನು ನೀಡುವ ಬಗ್ಗೆ ಎಂದು ಮಾತುಕತೆ ಆಗಿರುವುದಿಲ್ಲ. ಹಣದ ಭದ್ರತೆಗಾಗಿ ಕಾನೂನು ಬದ್ಧ ದಾಖಲೆಯನ್ನು ಮಾಡಿರುವುದಿಲ್ಲ. ಆ ರೀತಿ ದಾಖಲೆ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಆರೋಪಿಗೆ ಹಣ ನೀಡುವ ಸಮಯದಲ್ಲಿ ನಾನು ಸ್ವಂತ ಉದ್ದಿಮೆಯಾದ ಕಟ್ಟಿಗೆ ಅಂಗಡಿಯ ಕೆಲಸ ಮಾಡುತ್ತಿದ್ದೆ. ವಿಶ್ವ ಕರ್ಮ ಲೈನಿಂಗ್ ಮತ್ತು ವುಡ್ ವರ್ಕ್ ಎಂದು ನಾಮ ಇರುತ್ತದೆ. ಸದರಿ ವ್ಯವಹಾರದಿಂದ ಒಂದು ವರ್ಷಕ್ಕೆ30 ರಿಂದ 40 ಲಕ್ಷದವರೆಗೆ  ವಹಿವಾಟು ಇರುತ್ತದೆ. ಸದರಿ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ.  ಆ ಸಮಯದಲ್ಲಿ ನಾನು ತೆರಿಗೆ ಪಾವತಿದಾರನಲ್ಲ. ಆರೋಪಿಗೆ ಹಣ ನೀಡುವ ಸಮಯದಲ್ಲಿ ನನ್ನ ಬಳಿ ನಾಲ್ಕು ಲಕ್ಷ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ

ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸಾಮಾನ್ಯವಾಗಿ 30-40 ಲಕ್ಷ ವಹಿವಾಟು ಮಾಡುವವರು ತೆರಿಗೆ ಪಾವತಿದಾರರಾಗಿರುತ್ತಾರೆಂದರೆ ಸರಿ. ಮುಂದುವರೆದು 30-40 ಲಕ್ಷ ವ್ಯವಹಾರದ ವಹಿವಾಟು ಆಗಿರುತ್ತದೆ ಆದರೆ ತೆರಿಗೆ ಪಾವತಿ ಮಾಡುವಷ್ಟು ಉಳಿತಾಯ ಆಗದಕಾರಣ ಮಾಡಿರುವುದಿಲ್ಲ. ತಿಂಗಳಿಗೆ 5,000/- ಉಳಿಯುತ್ತಿತ್ತಾ ಎಂದರೆ 30 ರಿಂದ 40 ಸಾವಿರ ರೂ.ಗಳು ಉಳಿಯುತ್ತಿತ್ತು, ವ್ಯವಹಾರದಿಂದ ಒಂದು ತಿಂಗಳಿಗೆ ಎಲ್ಲಾ ಖರ್ಚು ಕಳೆದು 60 ರಿಂದ 70 ಸಾವಿರ ರೂ.ಗಳು ಉಳಿಯುತ್ತಿತ್ತು. ಸದರಿ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ವುಡ್ ವರ್ಕ್ ನಡೆಸುವ ಬಗ್ಗೆ ಪರವಾನಿಗೆ ಹಾಜರುಪಡಿಸಲು ತೊಂದರೆ ಇಲ್ಲ. ಏಪ್ರೀಲ್ 2 ನೇ ವಾರ ಆರೋಪಿಗೆ 4 ಲಕ್ಷ ಹಣವನ್ನು ನೀಡಿರುತ್ತೇನೆಂದು ಹೇಳಿದ್ದು ಆ 4 ಲಕ್ಷ ಹಣ ಮನೆಯಲ್ಲಿ ನಗದು ರೂಪದಲ್ಲಿತ್ತು ಎಂದು ನುಡಿಯುತ್ತಾರೆ. ಸದರಿ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಒಡವೆ ಗಿರವಿ ಇಟ್ಟ ಬಗ್ಗೆ ದಾಖಲೆ ಇರುತ್ತದೆ ಹಾಜರುಪಡಿಸುತ್ತೇನೆ. ಆರೋಪಿಗೆ ಹಣ ಮರುಪಾವತಿ ಮಾಡಲು ನವೆಂಬರ್ ತಿಂಗಳಲ್ಲಿ ಮೈಸೂರಿನಲ್ಲಿ ಕೇಳಿರುತ್ತೇನೆ. ಆಗ ಆರೋಪಿ ಹಣ ಇನ್ನೂ ಹೊಂದಾಣಿಗೆ ಆಗಿರುವುದಿಲ್ಲ ಇನ್ನು 6 ತಿಂಗಳ ಕಾಲ ಅವಧಿಯನ್ನು ಕೇಳಿದ್ದು, ನಾನು ನೀಡಿರುತ್ತೇನೆ. ತದನಂತರ ಜುಲೈ ನಲ್ಲಿ ಆರೋಪಿಗೆ ಹಣ ಮರುಪಾವತಿ ಮಾಡಲು ಕೇಳಿರುತ್ತೇನೆ. ಸದರಿ ಸಮಯದಲ್ಲಿ ಆರೋಪಿ ಚೆಕ್ ನ್ನು ನೀಡಿರುತ್ತಾರೆ. ಖಾಲಿ ಚೆಕ್ ಕೊಟ್ಟಿದ್ದರಾ ಎಂದರೆ ಸಾಕ್ಷಿ ಕರೆಂಟ್ ಅಕೌಂಟ್ ಚೆಕ್ ನೀಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಚೆಕ್ ನಲ್ಲಿ ಬರವಣಿಗೆ ಆಗಿರುತ್ತದಾ ಆಗಿತ್ತು ಎಂದು ನುಡಿಯುತ್ತಾರೆ. ನಿಪಿ-1 ಕ್ಕೆ ನನ್ನ ಮುಂದೆ ಸಹಿ ಮಾಡಿ ಕೊಟ್ಟಿರುತ್ತಾರೆ. ಸಾಕ್ಷಿ ನನಗೆ ಚೆಕ್ ನೀಡುವ ಸಮಯದಲ್ಲಿ ಚೆಕ್ ನಲ್ಲಿ ಬರವಣಿಗೆ ಆಗಿತ್ತು, ದಿನಾಂಕ ಅವರೇ ಬರೆದಿರುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲವಕಾಶವನ್ನು ಕೋರಿದ್ದರಿಂದ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು